ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಪಿ.ನಂಜುಂಡಿ ಇವರ ನಿಯಮ 330ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.

********

<u>ವಿಷಯ :</u> ಕಳೆದ ಸರ್ಕಾರಗಳಲ್ಲಿ ಜಾತಿವಾರು ಮಾಡಲು 189 ಕೋಟಿ ರೂಪಾಯಿಗಳನ್ನು ಖರ್ಚುಮಾಡಲಾಗಿತ್ತು. ಸರ್ಕಾರವು ತಕ್ಷಣವೇ ರಾಜ್ಯದಲ್ಲಿರುವ ಎಲ್ಲಾ ಜಾತಿವಾರು ಜನಗಣತಿಯ ಅಂಕಿ ಅಂಶಗಳನ್ನು ಕೂಡಲೇ ಪ್ರಕಟಿಸಬೇಕು. ಇದರಿಂದ ಅವರವರ ಸಮಾಜದ ಜನಸಂಖ್ಯೆಯನ್ನು ಖಚಿತಪಡಿಸಿಕೊಂಡು ಸಾಮಾಜಿಕ ನ್ಯಾಯದ ಅಡಿಯ ವ್ಯವಸ್ಥೆಯಲ್ಲಿ ಎಲ್ಲಾ ಕ್ಷೇತ್ರದಲ್ಲಿಯೂ ಮೀಸಲಾತಿ ಒಳಗೊಂಡಂತೆ ತಮ್ಮ ಹಕ್ಕು ಮತ್ತು ಸೌಲಭ್ಯಗಳನ್ನು ಪಡೆಯಲು ಸಹಕಾರಿಯಾಗುತ್ತದೆ. ಅದುದರಿಂದ ಜಾತಿವಾರು ಜನಗಣತಿಯ ಅಂಕಿ ಅಂಶಗಳನ್ನು ಬಹಿರಂಗ ಪಡಿಸಬೇಕೆಂಬ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

<u>ಉತ್ತರ :</u>

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ರಾಜ್ಯಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು 2015ರಲ್ಲಿ ನಡೆಸಲಾಗಿರುತ್ತದೆ. ಆಯೋಗವು ರಾಜ್ಯಾದ್ಯಂತ ಗಣತಿ ಕಾರ್ಯವನ್ನು ಕೈಗೊಂಡು ಇದಕ್ಕೆ ಸಂಬಂಧಿಸಿದ ಎಲ್ಲಾ ಪೂರಕ ವಿವರಗಳನ್ನು ಗಣಕೀಕರಣಗೊಳಿಸಲಾಗಿದೆ. ಈ ಕಾರ್ಯಕ್ಕಾಗಿ ಇದುವರೆವಿಗೂ ಆಯೋಗದ ವತಿಯಿಂದ ರೂ.162.00 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಮುಂದುವರೆದು, ಸರ್ಕಾರಕ್ಕೆ ಆಯೋಗದಿಂದ ವರದಿಯನ್ನು ಸಲ್ಲಿಸಲಾಗಿರುವುದಿಲ್ಲ. ದಿ: 21/09/2019ರ ಸರ್ಕಾರದ ಆದೇಶದಲ್ಲಿ ಆಯೋಗದ ಮಾನ್ಯ ಅಧ್ಯಕ್ಷರಾಗಿದ್ದ ಶ್ರೀ ಕಾಂತರಾಜರವರು ಮತ್ತು ಸದಸ್ಯರುಗಳ ಪದಾವಧಿಯನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆಯೋಗಕ್ಕೆ ಹೊಸದಾಗಿ ಅಧ್ಯಕ್ಷರು/ಸದಸ್ಯರುಗಳನ್ನು ನೇಮಕ ಮಾಡಿದ ನಂತರ ಸಮೀಕ್ಷಾ ವರದಿಯ ಬಗ್ಗೆ ಆಯೋಗದೊಂದಿಗೆ ಚರ್ಚಿಸಿ ಸೂಕ್ತ ಕ್ರಮವಹಿಸಲಾಗುವುದು.

ಸಂಖ್ಯೆ: ಹಿಂವಕ 86 ಬಿಸಿಎ 2020

(ಶ್ರೀ ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.